ಪಿ.ಡಬ್ಲೂಃ 1
ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 16.03.2022

ಮುಖ್ಯ ವಿಚಾರಣೆ ವಾದಿ ಪರ ಶ್ರೀ SDK, ವಕೀಲರಿಂದ

ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ ಅದರಲ್ಲಿರುವ ಎಲ್ಲಾ ಸಂಗತಿಗಳನ್ನು ನಾನು ನನ್ನ ವಕೀಲರಿಗೆ ಖುದ್ದು ಹೇಳಿ ಬರೆಸಿರುತ್ತೇನೆ. ಅದರಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣಿಕರಿಸುತ್ತೇನೆ.

ದಾವಾ ಆಸ್ತಿಯ ಸರ್ವೇ ನಂ.99/6 ಇದರ 2 ಪುಟಗಳ ಒಂದು ಉತಾರವನ್ನು ನಿಪಿ.1 ಎಂದು, ಸರ್ವೇ ನಂ.95/1 ಬಿ ಇದರ 2 ಪುಟಗಳ ಒಂದು ಉತಾರವನ್ನು ನಿಪಿ.2 ಎಂದು, ಡ ಉತಾರ ಸಂಖ್ಯೆ 401 ಇದರ ದೃಡಿಕೃತ ಪ್ರತಿಯನ್ನು ನಿಪಿ.3 ಎಂದು, ಡ ಉತಾರ ಸಂಖ್ಯೆ 613 ಇದರ ದೃಡಿಕೃತ ಪ್ರತಿಯನ್ನು ನಿಪಿ.4 ಎಂದು, ಡ ಉತಾರ ಸಂಖ್ಯೆ 1233 ಇದರ ದೃಡಿಕೃತ ಪ್ರತಿಯನ್ನು ನಿಪಿ.5 ಎಂದು, ಡ ಉತಾರ ಸಂಖ್ಯೆ 1261 ಇದರ ದೃಡಿಕೃತ ಪ್ರತಿಯನ್ನು ನಿಪಿ.6 ಎಂದು, ಡ ಉತಾರ ಸಂಖ್ಯೆ 1262 ಇದರ ದೃಡಿಕೃತ ಪ್ರತಿಯನ್ನು ನಿಪಿ.7 ಎಂದು, ಡ ಉತಾರ ಸಂಖ್ಯೆ 2008 ಇದರ ದೃಡಿಕೃತ ಪ್ರತಿಯನ್ನು ನಿಪಿ.8 ಎಂದು, ಡ ಉತಾರ ಸಂಖ್ಯೆ 2009 ಇದರ ದೃಡಿಕೃತ ಪ್ರತಿಯನ್ನು ನಿಪಿ.9 ಎಂದು, ಡ ಉತಾರ ಸಂಖ್ಯೆ 1529 ಇದರ ದೃಡಿಕೃತ ಪ್ರತಿಯನ್ನು ನಿಪಿ.10 ಎಂದು, ಹೆಗ್ಗಪ್ಪ ಬಸಪ್ಪ ದೊಡ್ಡಮನಿ ಇವರ ಶಾಲಾ ದಾಖಲಾತಿಯನ್ನು ನಿಪಿ.11 ಎಂದು, ಪುತ್ರಪ್ಪ ಮಲ್ಲಪ್ಪ ಮ್ಯಾಗೇರಿ ಇವರ ಶಾಲಾ ದೃಡಿಕರಣ ಪತ್ರವನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ಪ್ರತಿವಾದಿ ಪರ ವಕೀಲರ ತಕರಾರಿಗೆ ಒಳಪಟ್ಟು ನಿಪಿ.12 ಎಂದು, ಸರ್ವೇ ನಂ.95/1 ಬಿ ಇದರ ಉತಾರವನ್ನು ನಿಪಿ.13 ಎಂದು, ಡ ಉತಾರ ಸಂಖ್ಯೆ 5329 ಇದರ ದೃಡಿಕೃತ ಪ್ರತಿಯನ್ನು ನಿಪಿ.14 ಎಂದು ಗುರುತಿಸಲಾಯಿತು.

ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ನೀಡಲಾಯಿತು

(ನನ್ನ ಉಖ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)
ಓದಿ ಹೇ ಕೇ ಸರಿ ಅದೆ.

ದಿವಾಣಿ ನ್ಯಾಯಾಧೀಶರು, ಲಕ್ಷ್ಮೇಶ್ವರ.

ಪಿ.ಡಬ್ಲೂಃ 1
ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 30.03.2022

<u>ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಬಿ.ಎನ್.ಎಸ್. ವಕೀಲರಿಂದ</u>

ನಾನು ಕಳಸ ಗ್ರಾಮದಲ್ಲಿ ವಾಸವಾಗಿರುವುದಿಲ್ಲ ಗೋಜನೂರಿನಲ್ಲಿ ವಾಸವಾಗಿರುತ್ತೇನೆ. ಆ ರೀತಿ ನಾನು ನನ್ನ ತಂದೆಯ ಮನೆಯಲ್ಲಿ ವಾಸವಾಗಿರುತ್ತೇನೆ ಅದರ ಸಂಖ್ಯೆ ನನಗೆ ಗೋತ್ತಿರುವುದಿಲ್ಲ. ನಾನು ಕಳಸ ಗ್ರಾಮದ ವಿಳಾಸದಲ್ಲಿ ಪಡಿತರ ಚೀಟಿ, ಆಧಾರ ಕಾರ್ಡ ಇತ್ಯಾದಿಗಳನ್ನು ಪಡೆದುಕೊಂಡಿರುತ್ತೇನೆ. ಅದೇ ರೀತಿ ನನ್ನ ಮತದಾರರ ಪಟ್ಟಿಯೂ ಸಹ ಕಳಸ ಗ್ರಾಮದಲ್ಲಿ ಇರುತ್ತದೆ. ನನ್ನ ತಾಯಿ ನೀಲವ್ವ ತಂದೆಯನ್ನು ಬಿಟ್ಟು ಬೇರೆಯವನ ಜೊತೆ ವಾಸವಾಗಿರುತ್ತಾಳೆ. ಆ ರೀತಿ ನನ್ನ ತಾಯಿಯ ಮದುವೆ ಮಲ್ಲಪ್ಪನ ಜೊತೆ ಯಾವ ದಿನಾಂಕ ಆಯಿತು ಎಂದು ನನಗೆ ಗೋತ್ತಿರುವುದಿಲ್ಲ. ಆ ರೀತಿ ನನ್ನ ತಾಯಿ ನಾನು 4-5 ವರ್ಷದವನಿರುವಾಗ ನನ್ನ ತಂದೆಯನ್ನು ಬಿಟ್ಟು ಬೇರೆಯವರನ ಜೊತೆ ಹೋದರು ಎಂದು ನನ್ನ ತಂದೆ ಹೇಳಿರುತ್ತಾರೆ. ನನ್ನ ತಾಯಿ ಮಲ್ಲಪ್ಪನಿಂದ ವಿಚ್ಚೇದಿತ ಹೆಂಡತಿ ಎಂದು ನನ್ನ ವಾದಪತ್ರದಲ್ಲಿ ಬರೆಸಿರುವುದಿಲ್ಲ. ಆ ರೀತಿ ನನ್ನ ತಾಯಿ ಮದುವೆಯಾದ ದಿನಾಂಕ ನನಗೆ ಗೋತ್ತಿರುವುದಿಲ್ಲ. ನನ್ನ ತಾಯಿಯನ್ನು ಈಗ ನೋಡಿದರೆ ನಾನು ಗುರುತಿಸಬಲ್ಲೆ. ಆ ರೀತಿ ನನ್ನ ತಾಯಿ ಈಗ ಕಳಸ ಗ್ರಾಮದಲ್ಲಿ ಜೀವಂತವಾಗಿ ಬೇರೆಯವರ ಜೊತೆ ಇದ್ದಾರೆ. ನನ್ನ ತಾಯಿ ನೀಲವ್ವ ಮತ್ತು ಹನುಮಂತಪ್ಪ, ಹೆಗ್ಗಪ್ಪ ಕಳಸ ಗ್ರಾಮದಲ್ಲಿ ಒಟ್ಟಿಗೆ ವಾಸವಾಗಿದ್ದಾರೆ ಎಂದರೆ ಸರಿ. ಸದರಿ ಹನುಮಂತಪ್ಪ, ಹೆಗ್ಗಪ್ಪ ನನ್ನ ತಾಯಿಗೆ ಜನಿಸಿದ ಮಕ್ಕಳು ಎಂದರೆ ಸರಿ. ಹನುಮಂತಪ್ಪನ ಹೆಂಡತಿ ಶಾಂತವ್ವ ನನ್ನ ತಾಯಿ ಮತ್ತು ಅವರ ಮಕ್ಕಳ ಜೊತೆ ವಾಸವಾಗಿದ್ದಾರೆ ಎಂದರೆ ಸರಿ. ಅದೇ ರೀತಿ ಹೆಗ್ಗಪ್ಪನ ಹೆಂಡತಿಯೂ ಸಹ ಅವರ ಜೊತೆ ಒಟ್ಟಿಗೆ ವಾಸವಾಗಿದ್ದಾಳೆ ಎಂದರೆ ಸರಿ. ಈಗ ನನ್ನ ತಾಯಿಯ ಹೆಸರನ್ನು ನೀಲವ್ವ ಬಸಪ್ಪ ದೊಡ್ಡಮನಿ ಎಂದು ಕರೆಯುತ್ತಾರೆ ಎಂದರೆ ಸರಿ. ಸಾಮಾನ್ಯವಾಗಿ ಯಾವುದೇ ಹೆಣ್ಣು ಮಗಳು ತನ್ನ ಹೆಸರಿನ ಮುಂದೆ ಆಕೆಯ ಗಂಡನ ಹೆಸರು ಮತ್ತು ಮನೆತನದ ಹೆಸರು ಇಟ್ಟುಕೊಳ್ಳುತ್ತಾರೆ ಎಂದರೆ ಸರಿ. ಸದರಿ ಬಸಪ್ಪ ದೊಡ್ಡಮನಿ ಮತ್ತು ನನ್ನ ತಾಯಿ ಕಳಸ ಗ್ರಾಮದಲ್ಲಿ ಗಂಡ ಹೆಂಡತಿಯಾಗಿ ವಾಸವಾಗಿದ್ದರು ಎಂದರೆ ಸರಿ.

2. ಕಳಸ ಗ್ರಾಮದಲ್ಲಿ ನಾನು ಪ್ರತ್ಯೇಕವಾಗಿ ವಾಸವಾಗಿದ್ದೇನೆ ಎಂದರೆ ಸರಿ. ಮ್ಯಾಗೇರಿ ಎಂಬ ಅಡ್ಡ ಹೆಸರು ನನ್ನ ತಾಯಿಯ ತವರು ಮನೆ ಹೆಸರು ಎಂದರೆ ಸರಿ. ಆ ರೀತಿ ಗೋಜನೂರು ಗ್ರಾಮದಲ್ಲಿ ಮ್ಯಾಗೇರಿ ಎಂಬುವ ಹೆಸರಿನ ಯಾವುದೇ ಮನೆತನ ಇರುವುದಿಲ್ಲ ಎಂದರೆ ಸರಿ.

ಮ್ಯಾಗೇರಿ ಕುಟುಂಬದಲ್ಲಿ ನನ್ನ ತಾಯಿ ನೀಲವ್ವ ಮತ್ತು ಪಕ್ಕಿರವ್ವ ಸ್ವಂತ ಅಕ್ಕ ತಂಗಿಯರು ಎಂದರೆ ಸರಿ ಅವರು ನೀಲಪ್ಪನ ಮಕ್ಕಳು ಎಂದರೆ ಸರಿ. ಕಳಸ ಗ್ರಾಮದ ಸರ್ವೆ ನಂ.95/1 ಬಿ ಆಸ್ತಿಯನ್ನು ನನ್ನ ಹೆಸರಿಗೆ ಮಾಡಿಕೊಂಡಿದ್ದೇನೆ ಎಂದರೆ ಸರಿ. ನನ್ನ ತಾಯಿಯ ಸಹೋದರಿ ಪಕ್ಕಿರವ್ವ ಪೋತಿಯಾದರು ಎಂದರೆ ಸರಿ. ಕಳಸ ಗ್ರಾಮದ ಮನೆ ನಂ.952 ರಲ್ಲಿ ನಾನು ನನ್ನ ಹೆಂಡತಿ ಲಕ್ಷ್ಮವ್ವ, ಮಗ ಪಕ್ಕಿರಪ್ಪ, ನಿಂಗಪ್ಪ, ಸೊಸೆ ಸುಮಂಗಲಾ ಹಾಗೂ ಮತ್ತೊಬ್ಬ ಮಗ ರಾಜ ಒಟ್ಟಿಗೆ ವಾಸವಾಗಿದ್ದೇವೆ ಎಂದರೆ ಸರಿ. ನನ್ನ ತಾಯಿ ನೀಲವ್ವ ಮತ್ತು ಪಕ್ಕಿರವ್ವ ಈಗ ಮೃತಪಟ್ಟಿರುತ್ತಾರೆ ಎಂದರೆ ಸರಿ. ನನ್ನ ಜನ್ಮ ದಿನಾಂಕ ನನಗೆ ಗೋತ್ತಿರುವುದಿಲ್ಲ. ಅದೇ ರೀತಿ ನಾನು ಎಷ್ಟನೇ ಇಸ್ವಿಯಲ್ಲಿ ಜನಿಸಿದ್ದೇನೆ ಎಂದು ಗೋತ್ತಿರುವುದಿಲ್ಲ. ನಾನು ಯಾವ ದಿನಾಂಕದಂದು ಯಾರಿಗೆ ಜನಿಸಿದ್ದೇನೆ ಎಂದು ನನ್ನ ತಾಯಿ ನನಗೆ ತಿಳಿಸಿರುವುದಿಲ್ಲ ಎಂದರೆ ಸರಿ. ನನ್ನ ತಾಯಿ ಮತ್ತು ಮಲ್ಲಪ್ಪ ಗಂಡ ಹೆಂಡತಿಯಾಗಿ ಇದ್ದ ವಿಷಯ ನನಗೆ ಗೋತ್ತಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.11 ಮತ್ತು 12 ಕ್ಕು ಮತ್ತು ನನ್ನ ಆಧಾರ ಕಾರ್ಡಗೂ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ನಮ್ಮ ಅಜ್ಜನಿಂದ ಬಂದ ಆಸ್ತಿಯಾಗಿರುತ್ತದೆ. ನನ್ನ ಅಜ್ಜನ ಹೆಸರು ಯಲ್ಲಪ್ಪ ಎಂಬುದಾಗಿರುತ್ತದೆ ಅವರ ಹೆಸರಿನಲ್ಲಿರುವ ಉತಾರಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಯ ಪೂರ್ವಕ್ಕೆ ಯಲ್ಲವ್ವ ಮಾದರ ಇವರ ಆಸ್ತಿ ಇರುತ್ತದೆ. ಪಶ್ಚಿಮಕ್ಕೆ ದೊಡ್ಡಪ್ಪ ಚಲವಾದಿ ರವರ ಆಸ್ತಿ, ಉತ್ತರಕ್ಕೆ ಪಕ್ಕಿರಪ್ಪ ಮಾದರ, ದಕ್ಷಿಣಕ್ಕೆ ಬಸಪ್ಪ ಚಲವಾದಿ ರವರ ಆಸ್ತಿ ಇರುತ್ತದೆ. ಈ ಚೆಂಕಬಂದಿಯ ನಡುವೆ ದಾವಾ ಆಸ್ತಿ ಇಲ್ಲದೆ ಇದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂದಪಟ್ಟ ಕಾಗದಪತ್ರವನ್ನು ನಾನು ತೆಗೆಸಿ ನೋಡಿರುತ್ತೇನೆ ದಾವಾ ಆಸ್ತಿಯು ನಮ್ಮ ಪೂರ್ವಜರಿಗೆ ಸಂಬಂಧ ಇಲ್ಲದ ಆಸ್ತಿ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಪಕ್ಕಿರಪ್ಪ ತಾಯಿ ಯಲ್ಲವ್ವ, ಮಲ್ಲಪ್ಪ ಯಲ್ಲಪ್ಪ ಮಾಹರ, ಗಂಗಪ್ಪ ಅಡಿವೆಪ್ಪ ಮಾಹರ ಇವರ ಹೆಸರಿನಲ್ಲಿ ಎಂ.ಇ.ಸಿ ನಂ.2008 ರಂತೆ ದಾಖಲಾಗಿತ್ತು ಎಂದರೆ ಸರಿಯಲ್ಲ. ನನ್ನ ಅಜ್ಜನ ತಂದೆಯ ಹೆಸರು ನನಗೆ ಗೋತ್ತಿರುವುದಿಲ್ಲ. ದಾವಾ ಆಸ್ತಿಯನ್ನು 1952 ರಲ್ಲಿ ಸಣ್ಣನಿಂಗನಗೌಡ ರವರು ಸಾಗು ಮಾಡುತ್ತಿದ್ದ ವಿಚಾರ ನನಗೆ ಗೋತ್ತಿರುವುದಿಲ್ಲ. ಅದೇ ರೀತಿ ಸರ್ವೆ ನಂ.99/2 ನ್ನು ಮಲ್ಲಿಕಾರ್ಜಪ್ಪ ಬಿಜ್ಜೂರ ರವರು ಸಾಗು ಮಾಡಲು ತಪ್ಪಿದ್ದರಿಂದ ಎಂ.ಇ ನಂ.613 ರಂತೆ ರೈತ ಹಕ್ಕು ಕನ್ವೆ ಮಾಡಲಾದ ವಿಚಾರ ನನಗೆ ಗೋತ್ತಿರುವುದಿಲ್ಲ. ಆನಂತರ ಸದರಿ ಆಸ್ತಿಯು 1967 ರಲ್ಲಿ ಪಕ್ಕಿರಗೌಡ ಬರಮಗೌಡ ಪಾಟೀಲ ಇವರ ಹೆಸರಿನಲ್ಲಿ ಇದ್ದು ಸದರಿ ಆಸ್ತಿಯನ್ನು ಪಕ್ಕಿರಪ್ಪ ತಾಯಿ ಯಲ್ಲವ್ವ ಹರಿಜನ ರವರು ಸಾಗು ಮಾಡುತ್ತಿದ್ದರಿಂದ ಅವರ ಹೆಸರಿಗೆ ಮಂಜೂರು ಆಯಿತು ಎಂದರೆ ಸಾಕ್ಷಿ ನನಗೆ ಗೋತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಪಕ್ಕಿರಪ್ಪ, ಯಲ್ಲಪ್ಪನ ತಾಯಿ ಹನುಮವ್ವ ಇವರುಗಳಿಗೆ ತಂದೆ ಯಾರೆಂದು ಗೊತ್ತಿಲ್ಲದ ಕಾರಣ ತಾಯಿಯ

ಹೆಸರಿನಲ್ಲಿ ಗುರುತಿಸಿಕೊಂಡರು ಎಂದರೆ ಸರಿ. ಪಕ್ಕಿರಪ್ಪನ ಹೆಸರಿನಲ್ಲಿ ಎಂ ಇ ನಂ.1261 ಆಗಿರುವ ವಿಷಯ ನನಗೆ ಗೋತ್ತಿರುವುದಿಲ್ಲ. ಸರ್ವೇ ನಂ98, 99 ರ ಆಸ್ತಿಗೆ ಸಂಬಂಧಿಸಿದಂತೆ ಸರ್ಕಾರ ಇನಾಂ ಕಾಯಿದೆ ರದ್ದತಿ ಪ್ರಕಾರ ರದ್ದು ಮಾಡಿದ ವಿಚಾರ ನನಗೆ ಗೋತ್ತಿರುವುದಿಲ್ಲ. ಸರ್ವೇ ನಂ.99/1, 99/2 ಎರಡು ಆಸ್ತಿಗಳನ್ನು ಪಕ್ಕಿರಪ್ಪ ತಾಯಿ ಯಲ್ಲವ್ವ, ಮಲ್ಲಪ್ಪ ಯಲ್ಲಪ್ಪ ಮಹರ ಮತ್ತು ಗಂಗಪ್ಪ ಯಲ್ಲಪ್ಪ ಮಹರ ಇವರು ಸಾಗು ಮಾಡುತ್ತಿದ್ದ ಕಾರಣ ಎರಡು ಆಸ್ತಿಗಳನ್ನು ಒಂದುಗೂಡಿಸಲಾಯಿತು ಎಂದರೆ ಸರಿ. ಆ ಕಾರಣದಿಂದ ಸದರಿ ಆಸ್ತಿಗಳು ಪಿತ್ರಾರ್ಜಿತ ಆಸ್ತಿ ಎಂದೆರ ಸರಿ. ನನ್ನ ತಾಯಿ ಬಸಪ್ಪ ನಿಗಂಪ್ಪ ದೊಡ್ಡಮನಿ ಅವರನ್ನು ಮದುವೆಯಾಗಿದ್ದು ನಾನು ಅವರ ಮಗ ಎಂದರೆ ಸರಿಯಲ್ಲ. ಮಲ್ಲಪ್ಪನ ಜೊತೆಯಲ್ಲಿ ಪ್ರತಿವಾದಿ ವಾಸವಾಗಿರುತ್ತಾನೆ ಎಂದರೆ ಸರಿಯಲ್ಲ. ಸದರಿ ಪ್ರತಿವಾದಿ ಹಾಲವ್ವ ಎಂಬುವವರನ್ನು ಮದುವೆಯಾಗಿದ್ದು ಅವರ ದಾಂಪತ್ಯ ಜೀವನದಿಂದ ಹಾಲಪ್ಪ, ನಿಲವ್ವ, ಯಲ್ಲವ್ವ ಜನಿಸಿದ್ದಾರೆ ಎಂದರೆ ಸರಿಯಲ್ಲ. ಸದರಿಯವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಪ್ರತಿವಾದಿಗೆ ನಾನೇ ಅಡಿಗೆ ಮಾಡಿ ಹಾಕುತ್ತೇನೆ ಆ ರೀತಿ 2 ದಿನಕ್ಕೊಮ್ಮೆ ನಾನು ಕಳಸ ಗ್ರಾಮಕ್ಕೆ ಹೋಗಿ ಬರುತ್ತೇನೆ. ಆ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಒಂದು ಎಕರೆ 40-50 ಸಾವಿರ ಆಗಬಹುದು. ನಿಪಿ.11 ಮತ್ತು 12 ನ್ನು ನಾನು 2016 ರಿಂದ ಇಚೆಗೆ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಮತ್ತು ಪ್ರತಿವಾದಿಯ ನಡುವೆ ತಂದೆ ಮಕ್ಕಳ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇಲ್ಲದೆ ಇದ್ದರೂ ಸುಮ್ಮನೆ ಪ್ರತಿವಾದಿಯ ವಿರುದ್ಧ ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿ ಬಸಪ್ಪ ನೀಲಪ್ಪ ದೊಡ್ಡಮನಿ ಎಂಬುವವರ ಹೆಂಡತಿ ಎಂದರೆ ಸಾಕ್ಷಿ ಅವರ ಸುದ್ದಿ ನನಗೆ ಗೋತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಬಸಪ್ಪನಿಗೆ ಜನಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಆಗಲಾಗದವರ ಮಾತು ಕೇಳಿ ಈ ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲಃ</u>

(ನನ್ನ ಉಖ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇ ಕೇ ಸರಿ ಅದೆ.

ದಿವಾಣಿ ನ್ಯಾಯಾಧೀಶರು, ಲಕ್ಷ್ಮೇಶ್ವರ.